**ದಿನಾಂಕಃ02.09.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಶ್ರೀ. ದೂರುದಾರರ ಪರ ವಕೀಲರಿಂದಃ**

ದಿ.01.01.2019 ಮತ್ತು ದಿ.03.01.2019 ರಂದು ದೂರುದಾರರ ಶುಶ್ರುತಿ ಬ್ಯಾಂಕಿನ ಖಾತೆಯಿಂದ ನನ್ನ ಬ್ಯಾಂಕ್ ಖಾತೆಗೆ ರೂ.10,00,295/- ಮತ್ತು ರೂ.10,00,295/- ಹಣ ಜಮೆ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದೇ ಹೇಳುತ್ತಾರೆ 2 ವಾರಗಳ ನಂತರ ಆ ಹಣವನ್ನು ಬ್ಯಾಂಕಿನಿಂದ ಡ್ರಾ ಮಾಡಿ ಅವರಿಗೆ ಕೊಟ್ಟಿದ್ದೇನೆ. ದಿ.11.11.2019 ರಂದು ದೂರುದಾರರ ಹೆಂಡತಿಯ ಶುಶ್ರುತಿ ಬ್ಯಾಂಕಿನ ಖಾತೆಯಿಂದ ನನ್ನ ಬ್ಯಾಂಕ್ ಖಾತೆಗೆ ರೂ.3,00,236/- ಹಣ ವರ್ಗಾವಣೆ ಆಗಿದೆ ಎಂದರೆ ಸುಳ್ಳು. ಮೇಲೆ ಹೇಳಿದಂತೆ ದೂರುದಾರರ ಬ್ಯಾಂಕ್ ಖಾತೆಯಿಂದ ನನ್ನ ಬ್ಯಾಂಕ್ ಖಾತೆಗೆ ಬಂದ ಹಣವನ್ನು 2 ವಾರಗಳ ನಂತರ ಬ್ಯಾಂಕಿನಿಂದ ಡ್ರಾ ಮಾಡಿ ಅವರಿಗೆ ಕೊಟ್ಟಿದ್ದೇನೆ ಎಂದು ನನ್ನ ಪ್ರತ್ಯುತ್ತರದಲ್ಲಿ ಹೇಳಿಲ್ಲ ಎಂದರೆ ಸುಳ್ಳು. ಮೇಲೆ ಹೇಳಿದಂತೆ ದೂರುದಾರರಿಗೆ ನಾನು ಯಾವುದೇ ಹಣವನ್ನು ಡ್ರಾ ಮಾಡಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದೂರುದಾರರಿಗೆ ಮತ್ತು ಅವರ ಹೆಂಡತಿಗೆ ಆದಾಯದ ಮೂಲಕ ಇತ್ತು ಹೀಗಾಗಿ ಅವರು ನನಗೆ ರೂ.96 ಲಕ್ಷ ವಿವಾದಿತ ಸಾಲದ ಹಣವನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ನಾನು ಬೇರೆಯವರ ಹತ್ತಿರ ಸಣ್ಣ ಪುಟ್ಟ ಸಾಲ ಮಾಡಿದ್ದೇನೆ. ನನಗೆ ಕೃಷ್ಣ ಬಿ ಮರಿಯಂಕಾ ಇವರ ಪರಿಚಯ ಇಲ್ಲ ಹಾಗೂ ಇವರು ನನ್ನ ಮೇಲೆ ಸಿ,ಸಿ. ನಂ. 1996/20 ಎಂಬ ಒಂದು ಚೆಕ್ಕು ಬೌನ್ಸ ಪ್ರಕರಣ ದಾಖಲಿಸಿರುವ ವಿಷಯ ಗೊತ್ತಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

(ಓದಿ ಹೇ.ಕೇ.ಸ.ಇ.)

(ಭೋಲಾ ಪಂಡಿತ)
20ನೇ ಅ.ಮು.ಮ.ದಂ.,
ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC030158842021/truecopy/order-7.pdf

www.ecourtsindia.com